ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶಿಡ್ಲಘಟ್ಟ.

**ಸಿ.ಸಿ.421/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | :: | ಬಸವರಾಜು | ಸಿಡಬ್ಲ್ಯೂ:: **04** |
| ತಂದೆಯ ಹೆಸರು | :: | ಲೇಟ ವೆಂಕಟಸ್ವಾಮಿ | ಪಿಡಬ್ಲ್ಯೂ:: **03** |
| ವಯಸ್ಸು | :: | 41 ವರ್ಷ | ಪ್ರಮಾಣೀಕರಿಸಿದ ದಿನಾಂಕ |
| ವೃತ್ತಿ | :: | ಖಾಸಗಿ ಕೆಲಸ | 09.07.2026 |
| ವಾಸ ಸ್ಥಳ | :: | ಚೀಮಂಗಳ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು. | |

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ನಿಪಿ-**2** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**2**(ಎ) ಎಂದು ಗುರುತಿಸಲಾಯಿತು. ದಿನಾಂಕ **06.02.2014** ರಂದು ಮಧ್ಯಾಹ್ನ **2.00** ರಿಂದ **3.00** ಗಂಟೆಯ ಸಮಯದಲ್ಲಿ ಚೀಮಂಗಳ ಗ್ರಾಮದ ಬಸ್ ನಿಲ್ದಾಣದಿಂದ ಸ್ವಲ್ಪ ಮುಂದೆ ಸಹಿ ಮಾಡಿರುತ್ತೇನೆ. ನಿಪಿ-**2** ರ ಕಾಲಕ್ಕೆ ಒಂದು ಕಲ್ಲನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿಯು ಮು.ಮಾ. **1** ನ್ನು ತೋರಿಸಲಾಗಿ ಗುರುತಿಸಿರುತ್ತಾರೆ. ನಿ.ಪಿ.**2** ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತು.

<u>ಪಾಟಿ ಸವಾಲುಃ ಆರೋಪಿ ಪರವಾಗಿ ಶ್ರೀ ಸಿ ಜಿ ಬಿ ವಕೀಲರಿಂದಃ</u>

ಚಾಸಾ-**1** ನಮ್ಮ ಗ್ರಾಮದವರು. ಸ್ಥಳ ಪಂಚಾನಾಮೆಗೆ ಬರುವಂತೆ ನನ್ನನ್ನು ಯಾರೂ ಕರೆದಿರುವುದಿಲ್ಲ. ನಿಪಿ-**2** ಕ್ಕೆ ಸಹಿ ಮಾಡಿರುವ ಸ್ಥಳ ಯಾವುದು ಎಂದು ನಿಖರವಾಗಿ ನನಗೆ ಹೇಳಲು ಸಾಧ್ಯವಿಲ್ಲ. ನಿಪಿ-**2** ರ ಕಾಲಕ್ಕೆ ಸ್ಥಳದಲ್ಲಿ ಯಾರು ಹಾಜರು ಇದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿಪಿ-**2** ಕಾಲಕ್ಕೆ ಪೋಲಿಸರು ಎಷ್ಟು ಜನ ಬಂದಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿಪಿ-**2** ರಲ್ಲಿ ಏನು ಬರೆದಿದೆ ಎಂದು ನನಗೆ ವಿವರವಾಗಿ ಹೇಳಲು ಆಗುವುದಿಲ್ಲ. ಕೆಲವು ಸಂಗತಿಗಳು ಮಾತ್ರ ಗೊತ್ತು. ನಿಪಿ-**2** ರಲ್ಲಿರುವ ಸಂಗತಿಗಳನ್ನು ಹೇಳಲು ನನಗೆ ಸಾಧ್ಯವಿಲ್ಲ. ನಿಪಿ-**2** ಕ್ಕೆ ನನ್ನ ಜೊತೆ ಚಾಸಾ-**2** ರವರು ಸಹಿ ಮಾಡಿರುತ್ತಾರೆ. ಮು.ಮಾ-**1** ನ್ನು ಪೋಲಿಸರೇ ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ. ನಾನು ಮು.ಮಾ-**1** ನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಿಪಿ-**1** ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಮತ್ತು ನಿಪಿ-**2** ರಲ್ಲಿ ಬರೆದಿರುವ ಸಂಗತಿಗಳು

ಗೊತ್ತಿಲ್ಲದೇ ಇದ್ದರೂ ಸಹ ಚಾಸಾ-1 ರವರು ನನ್ನ ಸ್ನೇಹಿತರು ಮತ್ತು ನಮ್ಮ ಗ್ರಾಮದವರಾದ ಕಾರಣ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಓ. ಹೇ. ಕೇ. ಸರಿ ಇದೆ.**

**ಸಹಿ/-**

**(ಸುಕನ್ಯ ಸಿ.ಎಸ್.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.